ದಿನಾಂಕಃ **07-06-2022**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ

4 ನೇ ಪ್ರತಿವಾದಿಯ ಗಂಡ ಲಕ್ಷ್ಮಯ್ಯ ನನ್ನ ತಾಯಿಯ ಚಿಕ್ಕಪ್ಪನ ಮಗನಾಗಿರುತ್ತಾನೆ. ಈ ದಿನ ಅವರು ನ್ಯಾಯಾಲಯದಲ್ಲಿ ಹಾಜರಿರುತ್ತಾರೆ. ಸಾಕ್ಷಿಯು ಈಗ ಒಂದು ದಾಖಲೆಯನ್ನು ಹಾಜರುಪಡಿಸಿದ್ದು , ಅದನ್ನು ಪರಿಶೀಲಿಸಲಾಗಿ ದಿಃ 29-07-2007 ನೇ ಸಾಲಿನ ನೋಂದಣಿಯಾಗದ ಕ್ರಯಪತ್ರವಾಗಿರುತ್ತದೆ. ಸದರಿ ದಾಖಲೆಯನ್ನು ನಿಡಿ-7 ಎಂದು ಗುರುತಿಸಲಾಯಿತು.

ನಿಡಿ-7 ಕ್ರಯಪತ್ರವಲ್ಲ ಕರಾರು ಪತ್ರ ಆಗಿದೆ ಎಂದರೆ ಸರಿ ನಿಡಿ-7 ದಾಖಲೆಯನ್ನು ನಾನೊಬ್ಬನೇ ಬರೆದುಕೊಟ್ಟಿದ್ದೇನೆ. ನಿಡಿ-7 ದಾಖಲೆಯು ನೋಂದಣಾಧಿಕಾರಿಗಳ ಕಛೇರಿಯಲ್ಲಿ ನೋಂದಣಿಯಾಗಿಲ್ಲ ಎಂದರೆ ಸರಿ. ನಾನು ಲಕ್ಷ್ಮಮ್ಮ ವಾದಿಯ ಸ್ವತ್ತನ್ನು ಲಪಟಾಯಿಸಲು ನಿಡಿ-7 ನ್ನು ಸೃಷ್ಟಿಮಾಡಿದ್ದೇವೆ ಎಂದರೆ ಸರಿಯಲ್ಲ. ನಿಡಿ-7 ರಲ್ಲಿ ನಮೂದಾಗಿರುವ ಸ್ವತ್ತು ನನ್ನ ತಂದೆಗೆ ಸರ್ಕಾರದಿಂದ ಮಂಜೂರಾದ ಸ್ವತ್ತು ಎಂದರೆ ಸರಿ. ನಿಡಿ-7 ರಲ್ಲಿ ನಮೂದಾಗಿರುವ ಸ್ವತ್ತು ರಾಮಯ್ಯನಿಗೆ ಸೇರಿದ ಸ್ವತ್ತು ಎಂದರೆ ಸರಿ. ಆದ್ದರಿಂದ ನಿಡಿ-7 ರಲ್ಲಿ ನಮೂದಾಗಿರುವ ಸ್ವತ್ತಿನಲ್ಲಿ ಎಲ್ಲರೂ ಜಂಟೀ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

ನಿಡಿ-7 ರಲ್ಲಿ ನಮೂದಾಗಿರುವ ಸ್ವತ್ತು ನನ್ನ ತಂದೆಗೆ ಸೇರಿದ್ದು ಎಂದರೆ ಸರಿ. ಈ ಸ್ವತ್ತಿನಲ್ಲಿ ನನ್ನ ತಾಯಿ, ತಂಗಿ ಮತ್ತು ವಾದಿ ಎಲ್ಲರಿಗೂ ಹಕ್ಕು ಇದೆ ಎಂದರೆ ಸರಿ. ನಿಡಿ-7 ರಲ್ಲಿ ನಮೂದಾಗಿರುವ ಸ್ವತ್ತು ನನ್ನ ಹಿಸ್ಸೆಗೆ ಬಂದಿದೆ ಎಂದು ತೋರಿಸಲು ನ್ಯಾಯಾಲಯಕ್ಕೆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವ ದಾಖಲೆಗಳಲ್ಲಿ ಮೇಲೆ ಹೇಳಿದ ದಾಖಲೆ ಇಲ್ಲ ಎಂದರೆ ಸರಿಯಲ್ಲ

ಐಟಂ ನಂ. 1 ಸ್ವತ್ತು ನಮ್ಮ ಕುಟುಂಬದ ಸ್ವತ್ತು ಎಂದರೆ ಸರಿ. ಸಾಕ್ಷಿಗೆ ಈಗ ಒಂದು ಪಹಣಿಯನ್ನು ತೋರಿಸಲಾಗಿ ಒಪ್ಪಿದ್ದು , ಅದನ್ನು ನಿಪಿ-10 ಎಂದು ಗುರುತಿಸಲಾಯಿತು. ದಾವಾ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತು ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ಈ ದಾವಾ ದಾಖಲಿಸುವ ಮೊದಲು ವಾದಿ ಹಿಸ್ಸೆ ಕೇಳಿದ್ದರು ಎಂದರೆ ಸಾಕ್ಷಿ ಕೇಳಿಲ್ಲ ಎಂದು ನುಡಿಯುತ್ತಾರೆ. ದಾವಾ ಐಟಂ ನಂ. 4 ನ್ನು ಮಾರಾಟ ಮಾಡುವ ಕಾಲಕ್ಕೆ ನನ್ನ ಹೆಸರಿನಲ್ಲಿ ದಾಖಲೆ ಇರಲಿಲ್ಲ ಎಂದರೆ ಸರಿ. ರಾಮಯ್ಯ ಬಿನ್ ವೆಂಕಟಗಿರಿಯಪ್ಪನವರ ಹೆಸರಿನಲ್ಲಿತ್ತು ಎಂದರೆ ಸರಿ.

ದಾವಾ ಐಟಂ ನಂ. 4 ನ್ನು ನನ್ನ ತಂದೆಯ ಹೆಸರಿನಿಂದ ನನ್ನ ಹೆಸರಿಗೆ ಖಾತೆ ಮಾಡಿಸಿಕೊಳ್ಳಲು 2007-2008 ನೇ ಸಾಲಿನಲ್ಲಿ ಪಂಚಾಯ್ತಿಗೆ ಅರ್ಜಿ ನೀಡಿದ್ದೆ. ಖಾತೆ ಬದಲಾವಣೆಯಾದ ದಾಖಲೆ ನನ್ನ ಬಳಿ ಇತ್ತು. ಆ ದಾಖಲೆಯನ್ನು ಲಕ್ಷ್ಮಮ್ಮನಿಗೆ (4 ನೇ ಪ್ರತಿವಾದಿ ) ನೀಡಿದ್ದೆನು. ಸದರಿ ದಾಖಲೆ 4 ನೇ ಪ್ರತಿವಾದಿಯ ಬಳಿ ಇದೆ ಎಂದರೆ ಸರಿ. ಕಾನೂನು ಬಾಹಿರವಾಗಿ ಸೃಷ್ಟಿಯಾದ ದಾಖಲೆಯನ್ನು ಆಧರಿಸಿ 4 ನೇ ಪ್ರತಿವಾದಿ ಖಾತೆ ಮಾಡಿಸಿಕೊಂಡಿದ್ದಾರೆ ಎಂದರೆ ಸರಿಯಲ್ಲ.

ವಾದಿ ದಾವಾ ಸ್ವತ್ತುಗಳಲ್ಲಿ ಹಿಸ್ಸೆ ಕೇಳಿದ್ದು , ನಾನು ತಿರಸ್ಕರಿಸಿದ್ದರಿಂದ ನ್ಯಾಯಾಲಯಕ್ಕೆ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಶಿರಾ.